**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ಸಂಖ್ಯೆ : 31/2025**

**ಚಾ.ಸಾಃ 12, ಫ್ರಾ.ಸಾಃ 6**

| | |
|---|---|
| ಸಾಕ್ಷಿದಾರನ ಹೆಸರು | ಕೃಷ್ಣ ಜಿ |
| ತಂದೆಯ ಹೆಸರು | ವೆಂಕಪ್ಪ ಐತಾಳ |
| ವಯಸ್ಸು | 61 ವರ್ಷಗಳು |
| ಉದ್ಯೋಗ | ನಿವೃತ್ತ ವೈದ್ಯಾಧಿಕಾರಿಗಳು |
| ವಾಸ್ತವ್ಯ | ಕವಲಕ್ಕಿ, ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು 2006 ರಿಂದ 2024 ರವರೆಗೆ ಹೊನ್ನಾವರ ತಾಲೂಕು ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕ 28-10-2024 ರಂದು ರಾತ್ರಿ 11-30 ರ ಸಮಯಕ್ಕೆ ಸಂತೋಷ ನಾರಾಯಣ ಗೌಡ ಎಂಬ ಗಾಯಾಳು ಹೊಡೆದಾಟದ ಹಿನ್ನೆಲೆಯಲ್ಲಿ ಹೊನ್ನಾವರ ಸರಕಾರಿ ಆಸ್ಪತ್ರೆಗೆ ದಾಖಲಾಗಿದ್ದು, ಆತನನ್ನು ಪರೀಕ್ಷಿಸಲಾಗಿ ಆತನ ಎಡ ಕಾಲಿನ ಎರಡೂ ಎಲುಬುಗಳು ಮುರಿದಿದ್ದವು. ಆತನಿಗೆ ಸೂಕ್ತ ಚಿಕಿತ್ಸೆ ನೀಡಿರುತ್ತೇನೆ ಮತ್ತು ಮುಂದಿನ ಚಿಕಿತ್ಸೆಗಾಗಿ ಎಲುಬು ತಜ್ಞರ ಬಳಿ ಕಳಿಸಿರುತ್ತೇನೆ. ಆತ ಕುಂದಾಪುರ ಚಿನ್ಮಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆ. ಆತ ಚಿಕಿತ್ಸೆ ಪಡೆದ ದಾಖಲೆ ಪರಿಶೀಲಿಸಿದಾಗ ಆತನ ಎಡಗಾಲಿನ ಮೂಳೆಗಳು ಮುರಿದಿದ್ದರಿಂದ ಆತನಿಗೆ ಆಗಿದ್ದ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಅದರಂತೆ ಪೊಲೀಸರ ಕೋರಿಕೆಯ ಮೇರೆಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು, ನಿ.ಪಿ. 9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 9(ಎ) ಎಂದು ಗುರುತಿಸಲಾಯಿತು. ಅದು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ.

ದಿಃ 08-04-2025 ರಂದು ಹೊನ್ನಾವರ ಪೊಲೀಸರು ಒಂದು ಮನವಿಯೊಂದಿಗೆ ಒಂದು ಕಟ್ಟಿಗೆಯನ್ನು ಕಳುಹಿಸಿದ್ದು, ಅಭಿಪ್ರಾಯ ಕೋರಿದ್ದು, ಸದರಿ ಕಟ್ಟಿಗೆಯಿಂದ ಹಲ್ಲೆ ಮಾಡಿದರೆ ಚಾ.ಸಾ. 1 ರವರಿಗೆ ಆಗಿದ್ದ ಮೂಳೆ ಮುರಿತ ಆಗುವ ಸಾಧ್ಯತೆ ಇರುತ್ತವೆ ಎಂಬುದಾಗಿ ನಾನು ನನ್ನ ಅಭಿಪ್ರಾಯ ನೀಡಿರುತ್ತೇನೆ. ಈಗ ಸದರಿ ಅಭಿಪ್ರಾಯವನ್ನು ನೋಡುತ್ತಿದ್ದು, ನಿ.ಪಿ. 10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 10(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಇದನ್ನೇ ಪೊಲೀಸರು ಅಭಿಪ್ರಾಯಕ್ಕಾಗಿ ಕಳುಹಿಸಿದ್ದು ಇದರಿಂದ ಹಲ್ಲೆ ಆದರೆ ನಿ.ಪಿ. 9 ರಲ್ಲಿ ಆಗುವ ಗಾಯಗಳು ಆಗುವ ಸಾಧ್ಯತೆ ಇದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ನಾಯ್ಕರವರಿಂದ**

ಚಾ.ಸಾ. 1 ರವರನ್ನು ಯಾರೋ ಕರೆದುಕೊಂಡು ಬಂದ್ದಿರು. ಯಾರು ಕರೆದುಕೊಂಡು ಬಂದಿದ್ದಾರೆ ಎಂಬುದನ್ನು ಗಾಯದ ಪ್ರಮಾಣ ಪತ್ರದಲ್ಲಿ ಅಥವಾ ಎಮ್ ಎಲ್ ಸಿ ರೆಜಿಸ್ಟರ್ ನಲ್ಲಿ ಬರೆದಿಲ್ಲ.

ಆತ ಆಸ್ಪತ್ರೆಗೆ ಬಂದಾಗ ಆತನಿಗೆ ಪ್ರಜ್ಞೆ ಇತ್ತು ಅದರೆ ನಡೆದಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆತ ಮದ್ಯಪಾನ ಮಾಡಿರುವಂತೆ ಕಂಡುಬಂದಿರುವುದಿಲ್ಲ. ಆತನ ರಕ್ತ ಪರೀಕ್ಷೆ ಮಾಡಿಸಿಲ್ಲ. ಆತ ಸರಿಯಾಗಿ ಮಾತನಾಡುತ್ತಿದ್ದ. ಯಾವ ರೀತಿ ಗಾಯ ಆಯಿತು ಎಂದಿದ್ದಕ್ಕೆ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಯಾರಿಂದ ಹಲ್ಲೆ ಆಯಿತು ಎಂದು ನಾನು ಕೇಳಿಲ್ಲ. ಆದರೆ ಕೋಲಿನಿಂದ ಹಲ್ಲೆ ಆಗಿರುವುದಾಗಿ ತಿಳಿಸಿರುತ್ತಾರೆ. ಅದನ್ನು ಎಮ್ ಎಲ್ ಸಿ ಯಲ್ಲಿ ಬರೆದಿಲ್ಲ. ಆತ ಆಸ್ಪತ್ರೆಗೆ ಬಂದ ಕಾಲಕ್ಕೆ ಎಕ್ಸರೇ ಯವರು ಇಲ್ಲದ ಕಾರಣ ನಾನು ಎಕ್ಸ ರೇ ಮಾಡಿಸಿಲ್ಲ. ಹೊನ್ನಾವರ ಸರಕಾರಿ ಆಸ್ಪತ್ರೆಯಲ್ಲಿ ಮೂಳೆ ತಜ್ಞರು ಇದ್ದಾರೆ. ಆದರೆ ಆತ ಬಂದಿದ್ದು ರಾತ್ರಿ ಸಮಯ ಆಗಿದ್ದರಿಂದ ಮೂಳೆ ತಜ್ಞರು ಇರಲಿಲ್ಲ. ಗಾಯಾಳು ತಾನು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತೇನೆ ಎಂದು ಹೇಳಿದ್ದರಿಂದ ಕಳುಹಿಸಿಕೊಟ್ಟಿರುತ್ತೇನೆ. ನಾನು ಎಕ್ಸರೇ ನೋಡಿಲ್ಲ. ಮು.ಮಾ. 1 ನ್ನು ನನ್ನ ಬಳಿ ತಂದಾಗ ಸೀಲ್ ಮಾಡಿ ತರಲಾಗಿತ್ತು. ಮು.ಮಾ. 1 ನ್ನು ನನ್ನ ಮುಂದೆ ಹಾಜರುಪಡಿಸಿದ್ದಾರೆ. ಪ್ರಕರಣದ ನಂಬರ್ ಇತ್ತು ಮತ್ತು ಅದರ ಮೇಲೆ ಒಂದು ಚೀಟಿ ಅಂಟಿಸಲಾಗಿತ್ತು. ಆದರೆ ಅದು ಏನೂ ಎಂದು ನಾನು ನೋಡಿಲ್ಲ. ಮು.ಮಾ. 1 ರಮೇಲೆ ನಾವು ಆಸ್ಪತ್ರೆಯ ಸೀಲ್ ಹಾಕಿ ಸಹಿ ಮಾಡಿ ಕಳುಹಿಸಿರುತ್ತೇವೆ. ಪೊಲೀಸರು ನನಗೆ ಯಾವುದೇ ದೊಣ್ಣೆಯನ್ನು ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದೊಣ್ಣೆಯನ್ನು ನೋಡದೇ ನಿ.ಪಿ.10 ರ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಒರಟಾದ ಪ್ರದೇಶದಲ್ಲಿ ಬಿದ್ದಾಗ ನಿಪಿ-9 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**